ಒಂದು ಹಳ್ಳಿಯಲ್ಲಿ ವಿರೂಪಾಕ್ಷಯ್ಯನೆಂಬ ರೈತ ವ್ಯವಸಾಯ ಮಾಡಿಕೊಂಡು ಜೀವನ ನಡೆಸುತ್ತಿದ್ದ. ಅವನಿಗೆ ಬಂಧು–ಬಳಗ ಯಾರೂ ಇರಲಿಲ್ಲ. ಒಮ್ಮೆ ಅವನು ಪಟ್ಟಣಕ್ಕೆ ಹೋಗಬೇಕಾದ ಸಂದರ್ಭ ಒದಗಿಬಂದಿತು. ಅವನ ಬಳಿ ನಗದಾಗಿ ಹತ್ತು ಸಾವಿರ ರೂಪಾಯಿಗಳು ಇದ್ದವು. ಅವನು ಅದರಲ್ಲಿ ತನ್ನ ಖರ್ಚಿಗಾಗಿ ಐದು ಸಾವಿರ ರೂಪಾಯಿ ತೆಗೆದುಕೊಂಡು ಹೋಗಲು ನಿರ್ಧರಿಸಿದ. ಆದರೆ ಇನ್ನುಳಿದ ಐದು ಸಾವಿರವನ್ನು ಯಾರ ಬಳಿ ಇಡಬೇಕೆಂದು ತಕ್ಷಣಕ್ಕೆ ಅವನಿಗೆ ಹೊಳೆಯಲಿಲ್ಲ. ಕೊನೆಗೆ ಅವನಿಗೆ ಆ ಹಳ್ಳಿಯ ಮುಖಂಡ ಗೋಪಾಲ ಗೌಡನ ನೆನಪಾಯಿತು. ಅವನು ನೇರವಾಗಿ ಗೌಡನ ಬಳಿಗೆ ಹೋಗಿ ತಾನು ಪಟ್ಟಣಕ್ಕೆ ಹೋಗುವ ವಿಷಯ ತಿಳಿಸಿ ತಾನು ಹಿಂತಿರುಗಿ ಬರುವವರೆಗೂ ಹಣವನ್ನು ಜೋಪಾನವಾಗಿ ಕಾಪಾಡಬೇಕೆಂದು ತಿಳಿಸಿ ಐದು ಸಾವಿರ ಕೊಟ್ಟು ಹೋದ.

ಸುಮಾರು ಒಂದು ತಿಂಗಳ ನಂತರ ಪಟ್ಟಣದಿಂದ ಹಿಂತಿರುಗಿ ಬಂದ ವಿರೂಪಾಕ್ಷಯ್ಯ, ಗೌಡನ ಬಳಿಗೆ ಹೋಗಿ ತಾನು ಕೊಟ್ಟಿದ್ದ ಐದು ಸಾವಿರ ರೂಪಾಯಿಯನ್ನು ಹಿಂತಿರುಗಿಸಲು ಕೇಳಿದ. ಆದರೆ ಗೌಡ, 'ಯಾರು ನೀನು? ಯಾವ ಹಣ? ನೀನು ಯಾರೆಂಬುದು ನನಗೆ ಗೊತ್ತೇ ಇಲ್ಲ' ಎಂದು ದಬಾಯಿಸಿ ಕಳುಹಿಸಿಬಿಟ್ಟ. ಅವನನ್ನು ಎದುರಿಸಲಾಗದ ವಿರೂಪಾಕ್ಷಯ್ಯ ಸಪ್ಪೆ ಮುಖ ಮಾಡಿಕೊಂಡು ಮನೆಗೆ ಹಿಂತಿರುಗುತ್ತಿದ್ದ. ಅದೇ ಸಮಯಕ್ಕೆ ಆ ಮಾರ್ಗದಲ್ಲಿ ಅವನಿಗೆ ಪರಿಚಿತಳಾಗಿದ್ದ ಕಮಲಮ್ಮ ಎದುರಾಗಿ– 'ಏನಾಯಿತು ವಿರೂಪಾಕ್ಷಯ್ಯ? ಯಾಕೆ ಸಪ್ಪಗಿದ್ದೀಯಾ?' ಎಂದು ಕೇಳಿದಳು. ಆಗ ವಿರೂಪಾಕ್ಷಯ್ಯ ಆಕೆಗೆ ನಡೆದ ಸಂಗತಿ ತಿಳಿಸಿದ. ಗೌಡನಿಂದ ಹಣವನ್ನು ಹೇಗೆ ವಸೂಲಿ ಮಾಡುವುದೆಂದು ತಿಳಿಯುತ್ತಿಲ್ಲ. ತುಂಬಾ ಬೇಸರವಾಗುತ್ತಿದೆ ಎಂದ. ಅದಕ್ಕೆ ಕಮಲಮ್ಮ, 'ನಾಳೆ ನೀನು ನಾನು ಹೇಳಿದ ಹಾಗೆ ಮಾಡು. ನಿನ್ನ ದುಡ್ಡನ್ನು ಕೊಡಿಸುವ ಜವಾಬ್ದಾರಿ ನನ್ನದು' ಎಂದವಳೇ ಅವನ ಕಿವಿಯಲ್ಲಿ ಏನನ್ನೋ ಹೇಳಿ ಕಳುಹಿಸಿಕೊಟ್ಟಳು.

ಮಾರನೆಯ ದಿನ ಕಮಲಮ್ಮ ಗೌಡನ ಬಳಿ ಹೋಗಿ, 'ಗೌಡರೇ ನಾನು ಒಂದು ವಾರದ ಮಟ್ಟಿಗೆ ಪಟ್ಟಣದಲ್ಲಿರುವ ನನ್ನ ಮಗನ ಮನೆಗೆ ಹೋಗಿಬರಬೇಕಾಗಿದೆ. ವಿರೂಪಾಕ್ಷಯ್ಯ ನಿಮ್ಮ ಹತ್ತಿರ ಐದು ಸಾವಿರ ಕೊಟ್ಟು ಹೋಗಿದ್ದನಂತಲ್ಲ. ಅದೇರೀತಿ ನನ್ನ ಬಳಿ ಇರುವ ಇಪ್ಪತ್ತು ಸಾವಿರವನ್ನು ನಿಮ್ಮ ಬಳಿ ಕೊಟ್ಟು ಹೋಗೋಣವೆಂದು ಬಂದಿದ್ದೇನೆ' ಎಂದಳು. ಅದೇ ಸಮಯಕ್ಕೆ ಅಲ್ಲಿಗೆ ಬಂದ ವಿರೂಪಾಕ್ಷಯ್ಯ ಗೌಡನಿಗೆ ತನ್ನ ಹಣ ಹಿಂತಿರುಗಿಸುವಂತೆ ಕೇಳಿದ. ವಿರೂಪಾಕ್ಷಯ್ಯನ ಹಣ ಹಿಂತಿರುಗಿಸಿದರೆ ಕಮಲಮ್ಮ ಕೊಡುವ ಇಪ್ಪತ್ತು ಸಾವಿರವನ್ನು ಲಪಟಾಯಿಸಬಹುದು ಎಂದು ಯೋಚಿಸಿದ ಗೌಡ, 'ಅದಕ್ಕೇನಂತೆ ಹಾಗೇ ಆಗಲಿ' ಎಂದು ಹೇಳಿ ಮನೆಯೊಳಗೆ ಹೋಗಿ ವಿರೂಪಾಕ್ಷಯ್ಯನ ಐದು ಸಾವಿರವನ್ನು ತಂದು ಅವನ ಕೈಗೆ ಕೊಟ್ಟ. ಕೂಡಲೇ ಕಮಲಮ್ಮ ವಿರೂಪಾಕ್ಷಯ್ಯನನ್ನು ಕುರಿತು– 'ವಿರೂಪಾಕ್ಷಯ್ಯ ನೀನು ಪಟ್ಟಣಕ್ಕೆ ಹೋಗಿದ್ದೆಯಲ್ಲ. ಅಲ್ಲಿ ನನ್ನ ಮಗ ಹೇಗಿದ್ದಾನೆ? ಹುಷಾರಾಗಿದಾನಾ? ಏನೂ ತೊಂದರೆಯಿಲ್ಲವಷ್ಟೆ?' ಎಂದು ಕೇಳಿದಳು. ವಿರೂಪಾಕ್ಷಯ್ಯ– 'ಓ ತುಂಬಾ ಚೆನ್ನಾಗಿದಾನೆ ಕಮಲಮ್ಮ! ಏನೂ ತೊಂದರೆಯಿಲ್ಲ. ಮುಂದಿನ ವಾರ ನಿನ್ನನ್ನು ನೋಡಲು ಬರುತ್ತೇನೆಂದು ಹೇಳಿದ್ದಾನೆ' ಎಂದ. ಕೂಡಲೇ ಕಮಲಮ್ಮ ಗೌಡನ ಕಡೆ ತಿರುಗಿ– 'ಗೌಡ್ರೇ ನನ್ನ ಮಗ ಹುಷಾರಾಗಿದಾನಂತೆ. ಇನ್ನು ಸುಮ್ಮ ಸುಮ್ಮನೆ ದುಡ್ಡು ಖರ್ಚು ಮಾಡಿಕೊಂಡು ನಾನ್ಯಾಕೆ ಅಷ್ಟು ದೂರ ಹೋಗಲಿ? ಬರುತ್ತೇನೆ' ಎನ್ನುತ್ತ ತನ್ನ ಮನೆಯ ಕಡೆ ಹೊರಟಳು.

ಹೀಗೆ ಕಮಲಮ್ಮ ಮಾಡಿದ ಉಪಾಯದಿಂದ ವಿರೂಪಾಕ್ಷಯ್ಯನಿಗೆ ಅವನ ಹಣ ಸಿಕ್ಕಿತು. ಅವನು ಕಮಲಮ್ಮನಿಗೆ ಕೃತಜ್ಞತೆಯನ್ನು ತಿಳಿಸಿ ತನ್ನ ಮನೆಯ ದಾರಿ ಹಿಡಿದ.

(ಸಂಗ್ರಹ)